

ಚಿತ್ರ: ರಂಜು ಪಿ

ಎಲ್ಲಾ ಪೋಷಕರೂ ಒಮ್ಮೆ ಮಕ್ಕಳಾಗಿದ್ದವರೇ. ತಮ್ಮ ಬಾಲ್ಯಕ್ಕೂ ತಮ್ಮ ಮಕ್ಕಳ ಬಾಲ್ಯಕ್ಕೂ ಬಹಳ ವ್ಯತ್ಯಾಸವಿದೆಯೆಂದು ಹೇಳುತ್ತಾರೆಯೇ ಹೊರತು, ಯಾವ ರೀತಿಯ ವ್ಯತ್ಯಾಸ ಎಂದು ಖಂಡಿತ ತಿಳಿದಿಲ್ಲ. ಈಗಿನ ಪೋಷಕರು ಚಿಕ್ಕವರಿದ್ದಾಗ ಅಥವಾ ಇನ್ನೂ ಹಿಂದೆ, ಪೋಷಕರ 'ಓದು' ಎನ್ನುವ ಒತ್ತಡ ಮಕ್ಕಳ ಮೇಲಿರಲಿಲ್ಲ. ಅದಕ್ಕೂ ಮಿಗಿಲಾಗಿ ಅಂದಿನ ಮಕ್ಕಳಿಗೆ ಹೊರಗಿನ ಪ್ರಪಂಚದ ಅರಿವು ಮೂಡುತ್ತಿದ್ದುದೇ ಅವರು ವಯಸ್ಕರಾದ ನಂತರ! ಬೆಳೆದು ದೊಡ್ಡವರಾಗುವವರೆಗೂ ಪೋಷಕರ ಮಾತೇ ಮಕ್ಕಳಿಗೆ ಎಲ್ಲವೂ. ಆದರೆ ಇಂದಿನ ಮಕ್ಕಳಿಗೆ ತಂತ್ರಜ್ಞಾನದ ಮೂಲಕ, ಮಾಧ್ಯಮಗಳ ಮೂಲಕ 'ಎಕ್ಸ್‌ಪೋಷರ್' ಹೆಚ್ಚು. ಇದರಿಂದ ಜ್ಞಾನದ ಮಟ್ಟ ಹೆಚ್ಚುತ್ತದೆಯೇ ಹೊರತು ಬುದ್ಧಿಯಲ್ಲ! ಬಹುತೇಕ ಮಕ್ಕಳಿಗೆ ಸ್ವತಂತ್ರವಾಗಿ ಸಾರ್ವಜನಿಕ ಸಾರಿಗೆಯಲ್ಲಿ ಪಯಣಿಸಿ ಗೊತ್ತಿಲ್ಲ. ಇನ್ನೂ ಕೆಲವು ಮಕ್ಕಳಿಗೆ ವಯಸ್ಸು 4 ದಾಟಿದರೂ ರಸ್ತೆ ದಾಟಲು ಬರುವುದಿಲ್ಲ! ಇದರರ್ಥ ಮಕ್ಕಳು ಸಾಮರ್ಥ್ಯ-ರಹಿತರು ಎಂದಲ್ಲ. ಇದಕ್ಕೆ ಕಾರಣ ಅತೀ ಮುದ್ದಿನಿಂದ ಮಕ್ಕಳನ್ನು ಪೋಷಿಸುತ್ತಿರುವ ಪೋಷಕರ ವ್ಯಾಕುಲತೆ ಹಾಗೂ ಕಕ್ಕುಲತೆ.

ಇದು ಬರೀ ಶ್ರೀಮಂತ ಪೋಷಕರ ಕತೆಯಲ್ಲ. ಬಡ ಮಧ್ಯಮ ವರ್ಗದವರೂ ತಮಗೆ ಕಷ್ಟವಾದರೂ ಮಕ್ಕಳಿಗೆ ಐಷಾರಾಮಿ ಬದುಕನ್ನು ಕಟ್ಟಿಕೊಡುವುದರಲ್ಲಿ ಹಿಂದೆ ಬಿದ್ದಿಲ್ಲ. ಕೆಲವರಂತೂ ಅತೀ ಹೆಚ್ಚೇ ಎನಿಸುವಷ್ಟು ಅನಗತ್ಯ ಕಾಳಜಿ-ಗಳಿಂದ ಮಕ್ಕಳನ್ನು ಬೆಳೆಸುತ್ತಾರೆ. ಇದು ಎಷ್ಟರಮಟ್ಟಿಗೆ ಎಂದರೆ, ಪದವಿ ಮುಗಿದರೂ ಒಬ್ಬರೇ ಸ್ವತಂತ್ರವಾಗಿ ಯಾವ ಕೆಲಸವನ್ನೂ ಮಾಡಲಾರರು. ಎಲ್ಲಕ್ಕೂ ತಾಯಿಯ ಬೆಂಬಲ, ಅನುಮತಿ ಇರಲೇಬೇಕು. ಇಂಥ ಪೋಷಣೆಯ ಅಗತ್ಯ ನಿಜಕ್ಕೂ ಇದೆಯೇ?

ಹಾಗೆಂದು ಇದು ತಪ್ಪು ಎಂದು ಹೇಳಲಾಗದು. ಪ್ರತಿಯೊಬ್ಬ ಪೋಷಕ-ರಿಗೂ ತಮ್ಮ ಮಕ್ಕಳು ಎಲ್ಲಾ ರೀತಿಯಲ್ಲೂ ಚೆನ್ನಾಗಿರಬೇಕೆಂಬ ಆಸೆ ಇದ್ದೇ ಇರುತ್ತದೆ. ಆಸೆ ಹೆಚ್ಚಾದಾಗ ಜೀವನದಲ್ಲಿ ತಾವೇನು ಸಾಧಿಸಲು ಸಾಧ್ಯವಾಗ-ಲಿಲ್ಲವೋ ಅದನ್ನು ತಮ್ಮ ಮಕ್ಕಳ ಮೂಲಕ ಈಡೇರಿಸಿಕೊಳ್ಳುವ ಪ್ರಯತ್ನಕ್ಕೆ ಕೈಹಾಕುತ್ತಾರೆ. ಇದರಿಂದಾಗುವ ಪರಿಣಾಮಗಳ ಬಗ್ಗೆ ಯೋಚಿಸುವುದೇ ಇಲ್ಲ. ಇಲ್ಲಿ ಮಕ್ಕಳ ಇಷ್ಟಾನಿಷ್ಟಗಳು ಕೆಲವು ಪೋಷಕರ ಗಮನಕ್ಕೆ ಬರುವುದೇ ಇಲ್ಲ. ಇಷ್ಟವಿಲ್ಲದೆ ಮಾಡುವ ಕೆಲಸದಿಂದ ಒತ್ತಡ ಖಂಡಿತವಾಗಿಯೂ ಹೆಚ್ಚುತ್ತದೆ.

★ ಮಕ್ಕಳು ಭಿನ್ನವಾದ ಅಭಿರುಚಿ, ಆಸಕ್ತಿ, ಕುತೂಹಲ, ಉತ್ಸುಕತೆ ಹಾಗೂ ಒಲವನ್ನು ಹೊಂದಿರುತ್ತಾರೆ. ಒಂದು ಮಗುವಿದ್ದಂತೆ ಮತ್ತೊಂದು ಮಗುವಿರು-ವುದಿಲ್ಲ. ಯಾವ ವಯಸ್ಸಿನ ಮಕ್ಕಳೇ ಆಗಲಿ ಅವರನ್ನು ಇತರರೊಂದಿಗೆ ಹೋಲಿಸಬೇಡಿ. ಇದು ಅವರಲ್ಲಿ ಕೀಳರಿಮೆಯನ್ನು ಹೆಚ್ಚಿಸುತ್ತದೆ. ಮಕ್ಕಳು ಹೋಲಿಕೆಯನ್ನು ಸಹಿಸುವುದಿಲ್ಲ.

★ ಸೂಕ್ಷ್ಮಮತಿ ಮಕ್ಕಳು ಭಾವೋದ್ವೇಗಕ್ಕೆ ಒಳಗಾಗುವುದು ಹೆಚ್ಚು. ಇದಕ್ಕಾಗಿ ಅವರನ್ನು ಅಳುಬುರುಕ/ ಅಳುಬುರುಕಿ ಎಂದೆಲ್ಲಾ ಹಂಗಿಸಬೇಡಿ. ಇದರಿಂದ ಮಾನಸಿಕವಾಗಿ ಕುಸಿಯುವ ಸಾಧ್ಯತೆಯೇ ಹೆಚ್ಚು. ಮಕ್ಕಳ ಮನಸ್ಸನ್ನು ಅರ್ಥ ಮಾಡಿಕೊಂಡು ಅದಕ್ಕನುಗುಣವಾಗಿ ಶಿಸ್ತನ್ನು ಯೋಜಿಸಬೇಕು. ಎಲ್ಲಾ ಮಕ್ಕಳಿಗೆ ಒಂದೇ ಬಗೆಯ ಅಸ್ತ್ರವನ್ನು ಉಪಯೋಗಿಸಲು ಸಾಧ್ಯವಿಲ್ಲ. ಕೆಲವು ಮಕ್ಕಳು ಎಲ್ಲರೊಂದಿಗೆ ಬೆರೆಯಲು ಇಷ್ಟ ಪಡುವುದಿಲ್ಲ, ಗುಂಪಿನಲ್ಲಿ ಸೇರುವು-ದಿಲ್ಲ. ಅದು ಅವರ ಸ್ವಭಾವ. ಅವರನ್ನು ಅವರದಲ್ಲದ ಕ್ಷೇತ್ರದಲ್ಲಿ ನಿಲ್ಲಿಸಲು ಪ್ರಯತ್ನಿಸಬೇಡಿ. ಅವರಿಗೆ ಹೇಗೆ ಹಿತಕರವೋ ಹಾಗೆಯೇ ಅವರನ್ನು ಬೆಳೆಯಲು ಬಿಡಿ.

★ ನಯವಾದ ಹಾಗೂ ಮೃದುವಾದ ಶಿಸ್ತುಪಾಲನೆ ನಿಶ್ಚಿತವಾಗಿ ಇರಬೇಕು. ಇದು ಪರಿಣಾಮಕಾರಿ! ಹಾಗೆಂದು ಎಲ್ಲಾ ವಯಸ್ಸಿನ ಮಕ್ಕಳಿಗೂ ಒಂದೇ ರೀತಿಯ ಶಿಸ್ತುಪಾಲನೆ ಸಮಂಜಸವಲ್ಲ. ಐದು ವರ್ಷದ ಮಗುವಿಗೆ ತಪ್ಪು – ಸರಿಗಳ ಅರಿವು ಸ್ವಲ್ಪ ಮಟ್ಟಿಗೆ ಇರುತ್ತದೆ. ಅವರಿಗೆ ಸುತ್ತಿ ಬಳಸಿ ಹೇಳುವ ಬದಲು